ಸಾಕ್ಷಿಯು ತಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ವಿಚಾರಣೆ ಒಳಪಟ್ಟಿದ್ದು ಅವರನ್ನು ಪಿಡಬ್ಲೂ-1 ಎಂದು ಪರಿಗಣಿಸಿ ಇಂದು ದಿನಾಂಕಃ 25.09.2023 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ ಎಂ.ಎಸ್.ಜಿ. ವಕೀಲರಿಂದಃ

ನಾನು ನನ್ನ ಮೌಖಿಕ ವಿಚಾರಣೆಯ ಬದಲಾಗಿ ನನ್ನ ಮುಖ್ಯ ವಿಚಾರಣಾ ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ನಿಜವಿರುತ್ತವೆ ಮತ್ತು ಅವುಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಅದರಲ್ಲಿರುವ ಸಹಿಗಳು ನನ್ನದೇ ಇರುತ್ತವೆ. ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ .

ಸದರಿ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

1. ದಿನಾಂಕಃ16.02.1999 ರ ವಿಭಾಗ ಪತ್ರದ ದೃಡೀಕೃತ ಪ್ರತಿಯನ್ನು ನಿಪಿ-1,
2. ದಿನಾಂಕಃ11.02.2015 ರ ಕ್ರಯಪತ್ರದ ದೃಡೀಕೃತ ಪ್ರತಿಯನ್ನು ನಿಪಿ-2,
3. ದೇವವೃಂದ ಗ್ರಾಮದ ಸರ್ವೆ ನಂ.228, 228/1, 230, 228/2, 228/1 ಮತ್ತು 230/1 ರ ಪಹಣಿ ಪತ್ರಿಕೆಗಳನ್ನು ನಿಪಿ-3 ರಿಂದ 8 ಎಂದು ಗುರುತಿಸಲಾಯಿತು.

ಆದ್ದರಿಂದ ನನ್ನ ಪರವಾಗಿ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ .

**ಪಾಟೀ ಸವಾಲುಃ** ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ.

ಪಿ. ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಮೂಡಿಗೆರೆ